ಬೆಂಗಳೂರು ನಗರದಲ್ಲಿರುವ ವಾಣಿಜ್ಯ ತೆರಿಗೆ ಅಧಿಕಾರಿಗಳು.

೯೭೯ ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ತೆರಿಗೆ ಅಧಿಕಾರಿಗಳ ಸಂಖ್ಯೆ?

ಆ) ಇವರಲ್ಲಿ ೩, ೫ ಹಾಗೂ ೧೦ ವರ್ಷಗಳ ಕಾಲಾವಧಿ ಮುಗಿದಿರುವ ಅಧಿಕಾರಿಗಳ ಸಂಖ್ಯೆ ?

ಇ) ಈ ಅಧಿಕಾರಿಗಳನ್ನು ಧೀರ್ಘ ಕಾಲದಿಂದ ಬೆಂಗಳೂರು ನಗರದಲ್ಲಿಯೇ ಉಳಿಸಿಕೊಂಡಿರಲು ಕಾರಣಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು)

ಅ) ೭೩

ಆ) ಅಧಿಕಾರಿಗಳ ಕಾಲಾವಧಿ ಬಗ್ಗೆ ವಿವರ ಈ ಕೆಳಕಂಡಂತೆ ಇರುತ್ತದೆ.

೧)	೩ ವರ್ಷ	೭ ಅಧಿಕಾರಿಗಳು
೨)	೫ ವರ್ಷ	೨ ಅಧಿಕಾರಿಗಳು
೩)	೧೦ ವರ್ಷ	೩ ಅಧಿಕಾರಿಗಳು
	ಒಟ್ಟು	೧೨ ಅಧಿಕಾರಿಗಳು

ಇ) ೧) ೮ ಅಧಿಕಾರಿಗಳು ಸಧ್ಯದಲ್ಲೆ ನಿವೃತ್ತರಾಗುವರು.

೨) ಇಬ್ಬರು ಅಧಿಕಾರಿಗಳ ಪತಿ, ಪತ್ನಿಯರು ಬೆಂಗಳೂರಿನಲ್ಲಿಯೇ ಕೆಲಸ ಮಾಡುತ್ತಿರುವುದರಿಂದ.

೩) ಒಬ್ಬರನ್ನು ಅನಾರೋಗ್ಯದ ಕಾರಣದಿಂದ.

೪) ಒಬ್ಬರನ್ನು ಆಡಳಿತದ ದೃಷ್ಟಿಯಿಂದ.

ರಾಜಾಜಿನಗರ ವಂತರ್ತಿ ಪೀಣ್ಯ ಕೈಗಾರಿಕಾ ವಸಾಹತುವಿನಲ್ಲಿರುವ ಕೈಗಾರಿಕಾ ಮಳಿಗೆಗಳು

೧೨೮೫ ಶ್ರೀ ಪೆರಿಕಲ್ ಎಂ. ಮಲ್ಲಪ್ಪ, (ಚಿಕ್ಕಪೇಟೆ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ನಗರದ ಪೀಣ್ಯ ಮತ್ತು ರಾಜಾಜಿನಗರ ಕೈಗಾರಿಕಾ ವಸಾಹತುಗಳಲ್ಲಿ ಎಲ್ಲಾ ವಿಧವಾದ ಕೈಗಾರಿಕಾ ಮಳಿಗೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಖಾಲಿ ಇರುವ ಮಳಿಗೆಗಳ ಸಂಖ್ಯೆ ಎಷ್ಟು ?

ಇ) ಈ ಖಾಲಿ ಮಳಿಗೆಗಳನ್ನು ಹಂಚಿಕೆ ಮಾಡಲು ಅಳವಡಿಸಿಕೊಂಡಿರುವ ವಿಧಾನ ?

ಈ) ಲಾಟರಿ ಪದ್ಧತಿ ಮೂಲಕ ಮಳಿಗೆಗಳನ್ನು ಹಂಚಿಕೆ ಮಾಡುವ ಯೋಜನೆ ಇದೆಯೇ ?

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು.)

ಅ) ೧,೦೬೬ ರಾಜಾಜಿನಗರ–೧೪೩ ಪೀಣ್ಯ ೧, ೨ ಮತ್ತು ೩ನೇ ಹಂತ — ೯೨೩

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ